**ದಿನಾಂಕ: 11.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಆರೋಪಿ ಪರ ಶ್ರೀ. ವಕೀಲರಿಂದ:**

ವುಡ ಟೆಕ ಇಂಡಸ್ಟ್ರೀಸ ಸಂಸ್ಥೆಯನ್ನು ಪಕ್ಷಗಾರರಾಗಿ ಮಾಡಲು ನನಗೇನು ತೊಂದರೆ ಇರಲಿಲ್ಲ. ಸದರಿ ಸಂಸ್ಥೆಯು ಪಾಲುದಾರಿಕೆ ಸಂಸ್ಥೆ. ಲೋಕೇಶ ಅವರು ಒಪ್ಪಿಕೊಂಡಂತೆ ಹಣ ಕೊಟ್ಟರು ಆದ್ದರಿಂದ ಅವರನ್ನು ಪಕ್ಷಗಾರರಾಗಿ ಮಾಡಿಲ್ಲ. ವಿವಾದಿತ ಚೆಕ್ಕಿಗೂ ಆರೋಪಿಗೂ ಯಾವುದೇ ಸಂಬಂದಇಲ್ಲವೆಂದರೆ ಸರಿಯಲ್ಲ. ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಲೋಕೇಶ ಅವರು ನನ್ನ ಮೂಲಕ ಪ್ರಸ್ತುತ ದೂರು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡಬೇಕಾಗಿಲ್ಲವೆಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC030114972022/truecopy/order-6.pdf

ವಿವಾದಿತ ಚೆಕ್ಕುಗಳು ಆರೋಪಿ ನನಗೆ ಆಗಸ್ಟ-ಸೆಪ್ಟೆಂಬರ್ 2021 ರಲ್ಲಿ ನಮ್ಮ ಕಚೇರಿಗೆ ಬಂದು ಕೊಟ್ಟರುದ ನಿರ್ದಿಷ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ. ಆರೋಪಿಯು ಹಣವನ್ನು ಮರುಪಾವತಿ ಮಾಡಿಲ್ಲ ಆದ್ದರಿಂದ ಅವರ ವಿರುದ್ದ ಪೋಲೀಸರಿಗೆ ದೂರುನೀಡಿದ್ದೆ, ಪೋಲೀಸ ಠಾಣೆಗೆ ಬಂದು ಆರೋಪಿ ಹೇಳಿಕೆಯನ್ನು ಕೊಟ್ಟರು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

ವುಡ ಟೆಕ ಸಂಸ್ಥೆಯು ಈಗ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಈಗಲೂ ಸಹಾ ನಾನು ಸದರಿ ಸಂಸ್ಥೆಯಲ್ಲಿ ಪಾಲುದಾರರಾಗಿ ಕಾರ್ಯನಿರ್ವಹಿಸುತ್ತಿದ್ದೇನೆಂದರೆ ಸರಿಯಲ್ಲ. 2014-2015 ರಲ್ಲಿ ಸದರಿ ಸಂಸ್ಥೆಯಲ್ಲಿ ಆರೋಪಿ ಕಚೇರಿಯಲ್ಲಿ ವ್ಯಾಪಾರಕ್ಕಾಗಿ ಇಟ್ಟಿದ್ದ ಚೆಕ್ಕುಗಳನ್ನು ಲೋಕೇಶ ಅವರು ತೆಗೆದುಕೊಂಡು ದುರುಪಯೋಗಿಸಿ ನನ್ನ ಮೂಲಕ ಪ್ರಸ್ತುತ ಸುಳ್ಳು ಪ್ರಕರಣ ಸಲ್ಲಿಸಿರುತ್ತಾರೆಂದರೆ ಸರಿಯಲ್ಲ.

ಆರೋಪಿಯು ಸದರಿ ಸಂಸ್ಥೆಯಿಂದ ನಿವೃತ್ತಿ ಹೊಂದಬೇಕೆಂದು ನಾನು ಹಾಗೂ ಲೋಕೇಶ ಒತ್ತಾಯಿಸುತ್ತಿದ್ದರೆಂದರೆ ಸರಿಯಲ್ಲ. ಆರೋಪಿಯನ್ನು ಸಂಸ್ಥೆ ಯಿಂದ ನಿವೃತ್ತಿ ಹೊಂದಬೇಕೆಂಬ ಉದ್ದೇಶದಿಂದ ಅವರ ವಿರುದ್ದ ಪೋಲೀಸರಿಗೆ ಸುಳ್ಳು ದೂರು

This is a True Copy of the Court Records Online. Authenticated @ districts.ecourtsindia.com/cnr/KABC030114972022/truecopy/order-6.pdf

ನೀಡಿರುತ್ತೇನೆಂದರೆ ಸರಿಯಲ್ಲ. ಆದ್ದರಿಂದ ನಾವು ಕುಂತು ಬಗೆಹರಿಸಿಕೊಳ್ಳುತ್ತೇವೆಂದು ಹೇಳಿಕೆ ಪೋಲೀಸರಿಗೆ ಕೊಟ್ಟರೆಂದರೆ ನನಗೆ ಗೊತ್ತಿಲ್ಲ. 24.08.2020 ರಂದು ಛಾಪಾಕಾಗದ ಹಾಗೂ ಇನ್ನುಳಿದ ದಾಖಲೆಗಳಿಗೆ ಪೋಲೀಸ ಠಾಣೆಯನ್ನು ಆರೋಪಿಯನ್ನು ಒತ್ತಾಯಿಸಿ ಸದರಿ ದಾಖಲೆಯಲ್ಲಿ ತುಂಬಾ ಕೆಳಕಡೆ ಸಹಿ ಪಡೆದಿರುತ್ತೇವೆಂದರೆ ಸರಿಯಲ್ಲ. ಸದರಿ ದಾಖಲೆಗೂ ಹಾಗೂ ವಿವಾದಿತ ಚೆಕ್ಕಿಗೂ ಯಾವುದೇ ಸಂಬಂದವಿಲ್ಲವೆಂದರೆ ಸರಿಯಲ್ಲ. ನಾನು ದೂರನ್ನು ಓದಿ ಸಹಿಮಾಡಿರುತ್ತೇನೆ. ಎಂಒಯು ವನ್ನು ಸಹಾ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ದಿನಾಂಕ 01.04.2019 ರಂದು ವಿಜಯ ಬ್ಯಾಂಕ ಬ್ಯಾಂಕ ಆಫ್ ಬರೋಡಾನೊಂದಿಗೆ ಸೇರ್ಪಡೆಯಾಗಿರುತ್ತದೆಂದರೆ ನನಗೆ ಖಚಿತವಾಗಿ ಗೊತ್ತಿಲ್ಲ.

ಆರೋಪಿಯ ವಿಜಯ ಬ್ಯಾಂಕ ಚೆಕ್ಕು ಕೊಟ್ಟಿದ್ದರು ಬ್ಯಾಂಕ ಆಫ್ ಬರೋಡಾಗೆ ಸೇರಿದ ಹೊಸ ಚೆಕ್ಕುಗಳನ್ನು ಕೊಡಿ ಎಂದು ಕೇಳಲು ನನಗೇನು ತೊಂದರೆ ಇರಲಿಲ್ಲ .2014-2015 ರಲ್ಲಿ ಲೋಕೇಶ ಅವರು ನನಗೆ ಹಳೆ ಚೆಕ್ಕು ನೀಡಿದ್ದರು ಅದನ್ನು ನಾನು ದುರುಪಯೋಗಿಸಿರುತ್ತೇನೆಂದರೆ ಸರಿಯಲ್ಲ. 2020-2021 ರಲ್ಲಿ ಆರೋಪಿ ನನಗೆ ಹಳೆ ಚೆಕ್ಕುಗಳನ್ನು ಕೊಟ್ಟಿದ್ದರೆ ನಾನು ಅವುಗಳನ್ನು ಸ್ವೀಕರಿಸುತ್ತಿರಲಿಲ್ಲವೆಂದರೆ ಸರಿಯಲ್ಲ.

ತಿಳುವಳಿಕೆ ಪತ್ರ ಆರೋಪಿಗೆ ತಲುಪಿಲ್ಲ ಆದ್ದರಿಂದ ಅವರು ಪ್ರತ್ಯುತ್ತರ ನೀಡಿಲ್ಲವೆಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ಒಕ್ಕಣೆಗಳು ಹಾಗು ಸಹಿ ಮಾಡಿರುವ ಶಾಹಿ ಬೇರೆ

This is a True Copy of the Court Records Online. Authenticated @ districts.ecourtsindia.com/cnr/KABC030114972022/truecopy/order-6.pdf

ಇರುತ್ತದೆಂದರೆ ನನಗೆ ಗೊತ್ತಿಲ್ಲ, ಆರೋಪಿಯು ಭರ್ತಿ ಮಾಡಿ ತಂದು ಕೊಟ್ಟರು. ಆರೋಪಿ ನಿಪಿ.1ನ್ನು ನನ್ನ ಮುಂದೆ ಬರೆದಿಲ್ಲ ಅವರೇ ಬರೆದು ತಂದುಕೊಟ್ಟರು. ವಿವಾದಿತ ಚೆಕ್ಕುಗಳು ಆರೋಪಿಯ ವಯಕ್ತಿಕ ಖಾತೆಗೆ ಸೇರಿದ್ದಲ್ಲವೆಂದರೆ ಸರಿಯಲ್ಲ. ಜೈನ್ ಇಂಡಿಯನ ಮೋಟಾರ್ಸ ಡ್ರೈವಿಂಗ ಸ್ಕೂಲ ಖಾತೆಗೆ ಸೇರಿದ ಚೆಕ್ಕು ಎಂದರೆ ಆರೋಪಿಯು ಡ್ರೆವಿಂಗ ನಡೆಸುತ್ತಾರೆ , ಏಜೆನ್ಸಿ ನಡೆಸುತ್ತಾರೆ ಹಾಗೂ ವುಡ ಇಂಡಸ್ಟ್ರೀರ ಸಂಸ್ಥೆ ನಡೆಡುತ್ತಾರೆ ಆದ್ದರಿಂದ ಅವರಿಗೆಸೇರಿದ ಚೆಕ್ಕುಗಳಾಗಿರುತ್ತವೆ. ಆರೋಪಿ ಸದರಿ ಡ್ರೈವಿಂಗ ಸ್ಕೂಲನ ಪ್ರಾಂಶುಪಾಲರು ಎಂದರೆ ನನಗೆ ಗೊತ್ತಿಲ್ಲ ಆದರೆ ಸದರಿ ಡ್ರೈವಿಂಗ ಸ್ಕೂಲನ್ನು ಅವರೇ ನಡೆಸುತ್ತಿದ್ದಾರೆ. ಸದರಿ ಡ್ರೈವಿಂಗ ಸ್ಕೂಲನ್ನು ಪಕ್ಷಗಾರರಾಗಿ ಸೇರಿಸಲು ನನಗೇನು ತೊಂದರೆ ಇರಲಿಲ್ಲ.

2014ರಿಂದ 2017 ವರೆಗೂ ವುಡ ಟೆಕ ಇಂಡಸ್ಟ್ರೀರೇ ವತಿಯಿಂದ ಒಪ್ಪಂದ ಮಾಡಿಸಿಕೊಳ್ಳಲು ನನಗೇನು ತೊಂದರೆ ಇರಲಿಲ್ಲ. ಮಂಜುನಾಥ ಆದ ಮದ್ಯಸ್ತಗಾರರು ನನ್ನ ಹಾಗೂ ಆರೋಪಿಯ ಸ್ನೇಹಿತರು. ಈಗ ಅವರು ನಿವೃತ್ತಿ ಹೊಂದಿರುತ್ತಾರೆ. ಆರೋಪಿಗೆ ನಾನು ಯಾವುದೇ ಹಣ ಕೊಟ್ಟಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

(ಓ.ಹೇ.ಕೇ.ಸ.,)

**18ನೇ ಎ.ಸಿ.ಜೆ .ಎಂ.,**

**ಬೆಂಗಳೂರು.**

This is a True Copy of the Court Records Online. Authenticated @ districts.ecourtsindia.com/cnr/KABC030114972022/truecopy/order-6.pdf